**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 336/2024**

ಚಾ.ಸಾ–11, ಪ್ರಾ.ಸಾ–06

| | | |
|---|---|---|
| ಹೆಸರು | : | ನಂಜುಂಡರಾಜೇ ಅರಸ್ |
| ತಂದೆಯ ಹೆಸರು | : | ಲೇಟ್ ಕೃಷ್ಣೇ ಅರಸ್ |
| ವಯಸ್ಸು | : | 58 |
| ವೃತ್ತಿ | : | ಪೊಲೀಸ್ ಉಪನಿರೀಕ್ಷರು,<br>ಮಹಿಳಾ ಪೊಲೀಸ್ ಠಾಣೆ, ಮೈಸೂರು. |
| ವಾಸ | : | ಮೈಸೂರು |

**<u>ದಿನಾಂಕ 28.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

[

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಫೆಬ್ರವರಿ 2024 ರಿಂದ ಜೂನ್ 2024 ರವರೆಗೆ ಪೊಲೀಸ್ ಉಪ ನಿರೀಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 13.04.2024 ರಂದು ನಾನು ಠಾಣೆಯ ಠಾಣಾಧಿಕಾರಿಯಾಗಿದ್ದು, ಆ ದಿನ ಸಂಜೆ 6.15 ಗಂಟೆ ಸಮಯದಲ್ಲಿ ಫ್ರಾಸಾ–1 ರವರು ಲಿಖಿತ ದೂರನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

ನಂತರ ಸದರಿ ದೂರಿನ ಮೇಲೆ ಅಪರಾಧ ಸಂಖ್ಯೆ 123/2024 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ಅದನ್ನು ನ್ಯಾಯಾಲಯಕ್ಕೆ

ಮತ್ತು ಮೇಲಾಧಿಕಾರಿಕಗಳಿಗೆ ಸಲ್ಲಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.12 ಮತ್ತು 12(ಎ) ಎಂದು ಗುರುತಿಸಲಾಯಿತು.

ದಿನಾಂಕ 14.04.2024 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಫ್ರಾಸಾ-1 ರವರು ತೋರಿಸಿದ ಮೇರೆಗೆ ಫ್ರಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮವನ್ನು ಬೆಳಿಗ್ಗೆ 10.00 ರಿಂದ 11.00 ಗಂಟೆಯ ಸಮಯದಲ್ಲಿ ಜರುಗಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು.

ದಿನಾಂಕ 01.06.2024 ರಂದು ಆರೋಪಿತನ ಪತ್ತೆಗಾಗಿ ಚಾಸಾ-7 ಮತ್ತು 8 ರವರನ್ನು ನೇಮಕ ಮಾಡಿರುತ್ತೇನೆ. ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಅವರು ಆರೋಪಿತನನ್ನು ಬೆಂಗಳೂರಿನಲ್ಲಿ ಹಿಡಿದು, ಮಧ್ಯಾಹ್ನ 3.00 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿದರು. ಆತ ಈ ದಿನ ನ್ಯಾಯಾಲಯದ ಮುಂದೆ ಇರುತ್ತಾನೆ. ಆತನನ್ನು ವಿಚಾರಿಸಿ, ಆತನ ಸ್ವ ಹೇಳಿಕೆಯನ್ನು ಪಡೆದಿರುತ್ತೇನೆ. ಆತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ.

ಆರೋಪಿತನ ಹೇಳಿಕೆಯಂತೆ ನಾನು ಆತನನ್ನು ಮತ್ತು ಪಂಚರಾದ ಫ್ರಾಸಾ-2, 4 ಮತ್ತು ಚಾಸಾ-5 ರವರನ್ನು ತಿ. ನರಸೀಪುರ ಪಟ್ಟಣದ

ಮಾರುಕಟ್ಟೆಯ ರಸ್ತೆಯಲ್ಲಿರುವ ಶ್ರೀ ಭವಾನಿ ಜ್ಯುವೆಲ್ಸ್ ಅಂಗಡಿಗೆ ಕರೆದುಕೊಂಡು ಹೋಗಿ ಅಲ್ಲಿ ಆರೋಪಿತನು ತೋರಿಸಿದಂತೆ ಸದರಿ ಅಂಗಡಿಯಿಂದ ಒಂದು ಚಿನ್ನದ ಉಂಗುರವನ್ನು ಜಪ್ತುಪಡಿಸಿ ಸಂಜೆ 4.00 ರಿಂದ 4.45 ಗಂಟೆ ಸಮಯದಲ್ಲಿ ಪಂಚನಾಮವನ್ನು ಜರುಗಿಸಲಾಯಿತು. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.4 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು.

ಸದರಿ ಉಂಗುರವನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಆರೋಪಿತನು ತೋರಿಸಿದಂತೆ ಘಟನಾ ಸ್ಥಳದಲ್ಲಿ ಫ್ರಾಸಾ-2 ಮತ್ತು ಚಾಸಾ-6 ರವರ ಸಮಕ್ಷಮ ಪಂಚನಾಮವನ್ನು ಸಂಜೆ 5.15 ರಿಂದ 6.00 ಗಂಟೆ ಸಮಯದಲ್ಲಿ ಜರುಗಿಸಲಾಯಿತು. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.5 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು.

ನಂತರ ಆರೋಪಿತನನ್ನು ನ್ಯಾಯಾಂಗ ಬಂಧನಕ್ಕಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ಆನಂತರ ಫ್ರಾಸಾ–1 ರವರ ಮರುಹೇಳಿಕೆ, ಸಾಕ್ಷಿದಾರರಾದ ಫ್ರಾಸಾ–2, 3, 4, ಚಾಸಾ–5 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಫ್ರಾಸಾ–1 ರವರ ಮರುಹೇಳಿಕೆಯನ್ನು ಮತ್ತು ಚಾಸಾ–2, 3 ರವರ ಹೇಳಿಕೆಗಳಲ್ಲಿರುವ ನನ್ನ ಸಹಿಗಳನ್ನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.3(ಎ), 6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು.

ಈ ಮೇಲೆ ಹೇಳಿದ 3 ಪಂಚನಾಮಗಳ ವೇಳೆಗೆ ಭಾವಚಿತ್ರಗಳನ್ನು ಪಡೆಯಲಾಯಿತು. ಅವುಗಳನ್ನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.13 ರಿಂದ 15 ಎಂದು ಗುರುತಿಸಲಾಯಿತು. ಅವುಗಳ ಸಿ.ಡಿ. ಈಗಾಗಲೇ ನಿ.ಪಿ.10 ಎಂದು ಗುರುತಿಸಲ್ಪಟ್ಟಿದ್ದೆ.

ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಫ್ರಾಸಅ–5 ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ ಆರೋಪಿತನ ಪರವಾಗಿ**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ.5 ನ್ನು ಜರುಗಿಸಲು ದಿನಾಂಕ 01.06.2024 ರಂದು ಸಂಜೆ 5.00 ಗಂಟೆಗೆ ಹೋಗಿದ್ದೆವು. ಪಂಚರಿಗೆ ನೋಟೀಸ್ ನೀಡಿದ್ದೆವು. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಯನ್ನು ಈ ಮೇಲೆ

ಹೇಳಿದಂತೆ ಸಿದ್ದಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ನನ್ನ ಸಮಕ್ಷಮ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಅನುಕೂಲಕ್ಕೆ ತಕ್ಕಂತೆ ಭಾವಚಿತ್ರ ಪಡೆಯಲಾಗಿದೆ ಎಂದರೆ ಸರಿಯಲ್ಲ. ಫ್ರಾಸಾ–1 ರವರಿಗೆ ಸಹಾಯ ಮಾಡಲು ಆರೋಪಿತನ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**